# ಕೇಶವನಾಮ

ಈಶ ನಿನ್ನ ಚರಣ ಭಜನೆ

ಆಶೆಯಿಂದ ಮಾಡುವೇನು

ದೋಷರಾಶಿ ನಾಶಮಾಡೊ ಶ್ರೀಶ ಕೇಶವ ||

ಶರಣು ಹೊಕ್ಕೆನಯ್ಯ-ಎನ್ನ

ಮರಣ ಸಮಯದಲ್ಲಿ-ನಿನ್ನ

ಚರಣ ಸ್ಮರಣೆ ಕರುಣಿಸಯ್ಯ ನಾರಾಯಣಾ ||

ಶೋಧಿಸೆನ್ನ ಭವದ ಕಲುಶ

ಭೋಧಿಸಯ್ಯ ಜ್ಞಾನವೆನಗೆ

ಬಾಧಿಸುವ ಯಮನ ಬಾಧೆ ಬಿಡಿಸು ಮಾಧವಾ ||

ಹಿಂದನೇಕ ಯೋನಿಗಳಲಿ

ಬಂದು ಬಂದು ನೊಂದೆನಯ್ಯ

ಇಂದು ಭವದ ಬಂಧ ಬಿಡಿಸೊ ತಂದೆ ಗೋವಿಂದಾ ||

ಭ್ರಷ್ಟನೆನಿಸ ಬೇಡ ಕೃಷ್ಣ

ಇಷ್ಟು ಮಾತ್ರ ಬೇಡಿಕೊಂಬೆ

ಶಿಶ್ಟರೊಡನೆ ಇಟ್ಟು ಕಷ್ಟ ಬಿಡಿಸು ವಿಶ್ಣುವೇ ||

ಮದನನಯ್ಯ ನಿನ್ನ ಮಹಿಮೆ

ವದನದಲ್ಲಿ ನುಡಿಯುವಂತೆ

ಹೃದಯದೊಳಗೆ ಹುದುಗಿಸಯ್ಯ ಮಧುಸೂದನಾ ||

ಕವಿದುಕೊಂಡು ಇರುವ ಪಾಪ

ಸವಿದು ಪೋಗುವಂತೆ ಮಾಡೊ

ಜವನ ಬಾಧೆಯನ್ನು ಬಿಡಿಸೊ ತ್ರಿವಿಕ್ರಮಾ ||

ಕಾಮಜನಕ ನಿನ್ನನಾಮ

ಪ್ರೇಮದಿಂದ ಪಾಡುವಂಥ

ನೇಮವೆನಗೆ ಪಾಲಿಸಯ್ಯ ಸ್ವಾಮಿ ವಾಮನಾ ||

ಮೊದಲು ನಿನ್ನ ಪಾದ ಪೂಜೆ

ಒದಗುವಂತೆ ಮಾಡೋ ಎನ್ನ

ಹೃದಯದಲ್ಲಿ ಸದನ ಮಾಡೊ ಮುದದಿ ಶ್ರೀಧರ ||

ಹುಸಿಯನಾಡಿ ಹೊಟ್ಟೆ ಹೊರೆವ

ವಿಷಯದಲ್ಲಿ ರಸಿಕನೆಂದು

ಹುಸಿಗೆ ಹಾಕದಿರಯ್ಯ ಹೃಷೀಕೇಶನೇ ||

ಬಿದ್ದು ಭವದನೇಕ ಜನುಮ

ಬದ್ಧನಾಗಿ ಕಲುಷದಿಂದ

ಗೆದ್ದುಪೋಪ ಬುದ್ಧಿ ತೋರೋ ಪದ್ಮನಾಭನೆ ||

ಕಾಮ ಕ್ರೋಧ ಬಿಡಿಸಿ-ನಿನ್ನ

ನಾಮ ಜಿಹ್ವೆಯೊಳಗೆ ನುಡಿಸೊ

ಶ್ರೀ ಮಹಾನುಭಾವನಾದ ದಾಮೋದರಾ ||

ಪಂಕಜಾಕ್ಷ ನೀನು-ಎನ್ನ

ಮಂಕು ಬುದ್ಧಿಯನ್ನು ಬಿಡಿಸಿ

ಕಿಂಕರನ್ನ ಮಾಡಿಕೊಳ್ಳೊ ಸಂಕರುಷಣಾ ||

ಏಸು ಜನುಮ ಬಂದರೇನು

ದಾಸನಲ್ಲವೇನೊ ನಾನು

ಘಾಸಿ ಮಾಡದಿರು ಯೆನ್ನ ವಾಸುದೇವನೇ ||

ಬುದ್ಧಿ ಶೋನ್ಯನಾಗಿ ಎನ್ನ

ಬದ್ಧ ಕಾಯ ಕುಹಕಮನವ

ತಿದ್ದಿ ಹೃದಯ ಶುದ್ಧಿ ಮಾಡೊ ಪ್ರದ್ಯುಮ್ನನೇ ||

ಜನನಿಜನಕ ನೀನೆ ಎಂದು

ನೆನೆವೆನಯ್ಯ ದೀನ ಬಂಧು

ಎನಗೆ ಮುಕ್ತಿ ಪಾಲಿಸಯ್ಯ ಅನಿರುದ್ಧನೇ ||

ಹರುಷದಿಂದ ನಿನ್ನ ನಾಮ

ಸ್ಮರಿಸುವಂತೆ ಮಾಡು ನೇಮ

ವಿರಿಸು ಚರಣದಲ್ಲಿ ಪುರುಷೋತ್ತಮ ||

ಸಾಧುಸಂಗ ಕೊಟ್ಟು-ನಿನ್ನ

ಪಾದಭಜನೆಯಿತ್ತು ಎನ್ನ

ಭೇದಮಾಡಿ ನೋಡದಿರು ಶ್ರೀ ಅಧೋಕ್ಷಜಾ ||

ಚಾರು ಚರಣ ತೋರಿ ಎನಗೆ

ಪಾರುಗಾಣಿಸಯ್ಯ ಕೊನೆಗೆ

ಭಾರ ಹಾಕುತಿರುವೆ ನಿನಗೆ ನಾರಸಿಂಹನೇ ||

ಸಂಚಿತಾರ್ಥ ಪಾಪಗಳನು

ಕಿಂಚಿತಾದ ಪೀಡೆಗಳನು

ಮುಂಚಿತವಾಗಿ ಕಳೆದು ಪೊರೆಯೊ ಸ್ವಾಮಿ ಅಚ್ಯುತಾ ||

ಜ್ಞಾನ ಭಕ್ತಿ ಕೊಟ್ಟು ನಿನ್ನ

ಧ್ಯಾನದಲ್ಲಿ ಇಟ್ಟು ಸದಾ

ಹೀನ ಬುದ್ಧಿ ಬಿಡಿಸೊ ಮುನ್ನ ಶ್ರೀ ಜನಾರ್ದನ ||

ಜಪತಪಾನುಷ್ಠಾನ ವಿಲ್ಲದೆ

ಕುಪಥಗಾಮಿಯಾದ ಎನ್ನ

ಕೃಪೆಯಮಾಡಿ ಕ್ಷಮಿಸಬೇಕು ಉಪೇಂದ್ರನೇ ||

ಮೊರೆಯ ಇಡುವೆನಯ್ಯ ನಿನಗೆ

ಶರಧಿಶಯನ ಶುಭಮತೀಯ

ಇರಿಸು ಭಕ್ತನೆಂದು ಪರಮಪುರುಶ ಶ್ರೀಹರೇ ||

ಪುಟ್ಟಿಸಲೇಬೇಡ ಇನ್ನು

ಪುಟ್ಟಿಸಿದಕೆ ಪಾಲಿಸೆನ್ನ

ಇಷ್ಟು ಮಾತ್ರ ಬೇಡಿಕೊಂಬೆ ಶ್ರೀ ಕೃಷ್ಣನೇ ||

ಸತ್ಯವಾದ ನಾಮಗಳನು

ನಿತ್ಯದಲ್ಲಿ ಪಠಿಸುವವರ

ಅರ್ಥಿಯಿಂದ ಸಲಹುವನು ಕರ್ತೃ ಕೇಶವಾ ||

ಮರೆಯದಲೆ ಹರಿಯನಾಮ

ಬರೆದು ಓದಿ ಕೇಳಿದವಗೆ

ಕರೆದು ಮುಕ್ತಿ ಕೊಡುವ ನೆಲೆಯಾದಿ ಕೇಶವಾ ||